# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1123 (1262) |
| ಮಾನ್ಯ ಸದಸ್ಯರ ಹೆಸರು | ಶ್ರೀ ಡಿ.ಟಿ ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | 13 /03/2026 |
| ಉತ್ತರಿಸುವವರು | ಮಾನ್ಯ ಕಾರ್ಮಿಕ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ವಿವಿಧ ವಲಯಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ ಎಷ್ಟು (ವಿವಿಧ ವಲಯವಾರು ಮಾಹಿತಿ ನೀಡುವುದು)</td><td>ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಮಂಡಳಿಗಳ ಮೂಲಕ ಜಾರಿಗೊಳಿಸುತ್ತಿರುವ ಯೋಜನೆಗಳಲ್ಲಿ ನೋಂದಾಯಿತರಾದ ಅರ್ಹ ಫಲಾನುಭವಿಗಳಾದ / ಅಸಂಘಟಿತ ಕಾರ್ಮಿಕರ ವಿವರ ಈ ಕೆಳಕಂಡಂತಿದೆ.<br><br>1. <u>ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿ:</u><br><br>ಈ ಮಂಡಳಿಯಲ್ಲಿ ಅಸಂಘಟಿತ ವಲಯಕ್ಕೆ ಸೇರಿರುವ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರನ್ನು ಫಲಾನುಭವಿಗಳನ್ನಾಗಿ ನೋಂದಾಯಿಸಲಾಗುತ್ತಿದ್ದು, ಪ್ರಸ್ತುತ 25.13 ಲಕ್ಷ ಫಲಾನುಭವಿಗಳು ನೋಂದಣಿಯಾಗಿರುತ್ತಾರೆ.<br><br>2. <u>ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿ:</u><br><br>ಈ ಮಂಡಳಿಯು ಜಾರಿಗೊಳಿಸುತ್ತಿರುವ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳಡಿ ಹಾಗೂ ಕೇಂದ್ರ ಸರ್ಕಾರದ ಇ-ಶ್ರಮ್ ಕಾರ್ಯಕ್ರಮದಡಿ ನೋಂದಣಿಯಾದ ಕಾರ್ಮಿಕರ ಸಂಖ್ಯೆಗೆ ಈ ಕೆಳಕಂಡತ್ತಿರುವ ವಲಯವಾರು ವಿವರವನ್ನು ಅನುಬಂಧ 1 ರಿಂದ 3ರಲ್ಲಿ ಒದಗಿಸಿದೆ.<br><br>
<table>
<tr><th>ಕ್ರ. ಸಂ</th><th>ಯೋಜನೆ</th><th>ಕಾರ್ಮಿಕರ ಸಂಖ್ಯೆ</th><th>ಷರಾ</th></tr>
<tr><td>1</td><td>ಅಂಬೇಡ್ಕರ್‌ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ನೋಂದಣಿ (102 ಅಸಂಘಟಿತ ವರ್ಗಗಳ ಕಾರ್ಮಿಕರು)</td><td>2545607</td><td>ಅನುಬಂಧ-1</td></tr>
<tr><td>2</td><td>ಕರ್ನಾಟಕ ರಾಜ್ಯ ಖಾಸಗಿ ವಾಣಿಜ್ಯ</td><td>1050095</td><td>ಅನುಬಂಧ-2</td></tr>
</table>
</td></tr>
</table>

| | | | |
|---|---|---|---|
| | ಸಾರಿಗೆ ಕಾರ್ಮಿಕರ ಅಪಘಾತ ಪರಿಹಾರ ಯೋಜನೆ | | |
| 3 | ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ | | |
| 4 | ಇ-ಶ್ರಮ್ ಕಾರ್ಯಕ್ರಮದಡಿ ನೋಂದಣಿ | **11055289** | **ಅನುಬಂಧ-3** |
| 5 | ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ | **30256** | - |
| 6 | ಕರ್ನಾಟಕ ರಾಜ್ಯ ದಿನಪತ್ರಿಕೆ ಹಾಗೂ ಹಾಲು ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ: | **11388** | ಪತ್ರಿಕೆ ವಿತರಕರು-6834 ಹಾಲು ವಿತರಣಾ ಕಾರ್ಮಿಕರು-4554 ಒಟ್ಟು 11388 |

| | | |
|---|---|---|
| ಆ) | ನೀರು ಮತ್ತು ವಿದ್ಯುತ್ ಸಂಪರ್ಕದ ಕೊರತೆ ಹಾಗೂ ಅನಧಿಕೃತ ಆಸ್ತಿಗಳಿಗೆ ಇ-ಖಾತಾ ನೀಡುವ ವಿಳಂಬದಿಂದ ಅಸಂಘಟಿತ ಕಾರ್ಮಿಕರಿಗೆ ಉದ್ಯೋಗ ದೊರೆಯದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಈ ಕುರಿತಾಗಿ ಯಾವುದೇ ಅಧಿಕೃತ ದೂರುಗಳು ಸ್ವೀಕೃತವಾಗಿರುವುದಿಲ್ಲ. |
| ಇ) | ಬಂದಿದ್ದಲ್ಲಿ, ಈ ಕೊರತೆಯನ್ನು ನಿವಾರಿಸಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು; ಈ ಕಾರ್ಮಿಕರಿಗೆ ಸರ್ಕಾರವು ರೂಪಿಸಿರುವ ಯೋಜನೆಗಳು ಯಾವುವು; | |
| ಈ) | ಬೆಂಗಳೂರು, ಮೈಸೂರು, ಮಂಗಳೂರು ಹುಬ್ಬಳ್ಳಿ-ಧಾರವಾಡ ಇತ್ಯಾದಿ ಪ್ರದೇಶಗಳಲ್ಲಿ ಗಿಗ್ ಕಾರ್ಮಿಕರ ಪರಿಸ್ಥಿತಿ ಶೋಚನೀಯವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕಾರ್ಮಿಕ ಇಲಾಖೆಯ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಅಸಂಘಟಿತ ಕಾರ್ಮಿಕರ ಸಾಮಾಜಿಕ ಭದ್ರತಾ ಮಂಡಳಿಯ ವತಿಯಿಂದ ಬೆಂಗಳೂರು, ಮೈಸೂರು, ಮಂಗಳೂರು ಹುಬ್ಬಳ್ಳಿ-ಧಾರವಾಡ ಇತ್ಯಾದಿ ಪ್ರದೇಶಗಳು ಸೇರಿದಂತೆ ರಾಜ್ಯದಲ್ಲಿ ಗಿಗ್ ಕಾರ್ಮಿಕರು ಎದುರಿಸುವ ಸಮಸ್ಯೆಗಳು ಸರ್ಕಾರದ ಗಮನಕ್ಕೆ ಬಂದಿರುತ್ತದೆ. ಸದರಿ ಕಾರ್ಮಿಕರಿಗೆ ಸಾಮಾಜಿಕ ಭದ್ರತೆ ಒದಗಿಸುವ ಉದ್ದೇಶದಿಂದ ಮಂಡಳಿಯು ಕರ್ನಾಟಕ ಗಿಗ್ ವಿಮಾ ಯೋಜನೆಯನ್ನು ರೂಪಿಸಿ ಜಾರಿಗೊಳಿಸುತ್ತಿದ್ದು, ಸೌಲಭ್ಯಗಳು ಈ ಕೆಳಕಂಡಂತಿದೆ: 1) **ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ** |
| ಉ) | ಬಂದಿದ್ದಲ್ಲಿ, ಈ ಗಿಗ್ ಕಾರ್ಮಿಕರಿಗೆ (GIG) ಸರ್ಕಾರವು ರೂಪಿಸಿರುವ ಮತ್ತು ರೂಪಿಸಲು ಉದ್ದೇಶಿಸಿರುವ ಯೋಜನೆಗಳು ಯಾವುವು? | |

| | | |
|---|---|---|
| | | **<u>ಯೋಜನೆ:</u>**<br><br>ಇ-ಕಾಮರ್ಸ್ ವಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸ್ವಿಗ್ಗಿ, ಜೊಮಾಟೋಗಳಂತಹ ಸಂಸ್ಥೆಗಳಲ್ಲಿ ಫುಡ್‌ಡೆಲಿವರಿ ಮಾಡುವ ಹಾಗೂ ಮುಂತಾದ ಡೆಲಿವರಿ ವೃತ್ತಿಯಲ್ಲಿ ತೊಡಗಿಕೊಂಡ ಎಲ್ಲಾ ಅಸಂಘಟಿತ ಗಿಗ್ ಕಾರ್ಮಿಕರು ಸೇವಾ ಸಿಂಧು ಹಾಗೂ ಇ-ಶ್ರಮ್ ಪೋರ್ಟಲ್‌ಗಳ ಮೂಲಕ ನೋಂದಾಯಿಸಿಕೊಂಡು ಈ ಕೆಳಕಂಡ ಸೌಲಭ್ಯಗಳನ್ನು ಪಡೆಯಬಹುದಾಗಿದೆ.<br><br>**ಸೌಲಭ್ಯಗಳು:-**<br><br>• ಅಪಘಾತದಿಂದ ಮ ರಣ ಹೊಂದಿದಲ್ಲಿ ವಿಮಾ ಪರಿಹಾರ ರೂ2.00 ಲಕ್ಷ ಹಾಗೂ ರೂ2.00 ಲಕ್ಷ ಜೀವ ವಿಮಾ ಸೇರಿ ಒಟ್ಟು ರೂ.4.00 ಲಕ್ಷಗಳು.<br>• ಅಪಘಾತದಿಂದ ಶಾಶ್ವತ ದುರ್ಬಲತೆ ಹೊಂದಿದಲ್ಲಿ ರೂ.2.00 ಲಕ್ಷಗಳವರೆಗೆ<br>• ಆಸ್ಪತ್ರೆ ವೆಚ್ಚ ಮರುಪಾವತಿ ರೂ.1.00 ಲಕ್ಷಗಳವರೆಗೆ (ಅಪಘಾತ ಪ್ರಕರಣಗಳಿಗೆ ಮಾತ್ರ)<br>• ಜೀವ ವಿಮಾ ರೂ.2.00 ಲಕ್ಷಗಳು.<br><br>ಮುಂದುವರೆದು, ಗಿಗ್ ಕಾರ್ಮಿಕರಿಗೆ ಸಾಮಾಜಿಕ ಭದ್ರತಾ ಸೌಲಭ್ಯಗಳನ್ನು ಒದಗಿಸುವ ಉದ್ದೇಶದಿಂದ ಸಂಪನ್ಮೂಲ ಕ್ರೋಢೀಕರಿಸಲು Karnataka Platform based Gig Workers (Social Security and Welfare) Act, 2025 ಅನ್ನು **ದಿನಾಂಕ:12-09-2025** ರಂದು ಸರ್ಕಾರವು ಅಧಿಸೂಚಿಸಿರುತ್ತದೆ ಮತ್ತು ಇದಕ್ಕನುಗುಣವಾಗಿ ನಿಯಮಾವಳಿಯನ್ನು **ದಿನಾಂಕ:19-11-2025** ರಂದು ಅಧಿಸೂಚಿಸಲಾಗಿ ಮಂಡಳಿಯನ್ನು ರಚಿಸಲಾಗಿರುತ್ತದೆ. ಈ ಕಾಯ್ದೆಯಡಿ ಸುಂಕದ ರೂಪದಲ್ಲಿ ಸಂಗ್ರಹವಾಗಬಹುದಾದ ಅನುದಾನದಿಂದ ಮುಂದಿನ ದಿನಗಳಲ್ಲಿ ವಿವಿಧ ಸಾಮಾಜಿಕ ಭದ್ರತಾ ಯೋಜನೆಗಳನ್ನು ರೂಪಿಸಿ ಜಾರಿಗೊಳಿಸಲಾಗುವುದು. |

**ಕಾಇ 98 ಎಲ್‌ಇಟಿ 2026**

**(ಸಂತೋಷ್ ಎಸ್ ಲಾಡ್)**
**ಕಾರ್ಮಿಕ ಸಚಿವರು**

## ಅನುಬಂಧ-1

**ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀ ಡಿ ಟಿ ಶ್ರೀನಿವಾಸ್ (ಡಿ.ಟಿ.ಎಸ್)(ಶಿಕ್ಷಕರ ಕ್ಷೇತ್ರ)**
**ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1123(1262)**
**ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆಯಡಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ ವಲಯವಾರು ವಿವರ:**

| ಕ್ರ ಸಂಖ್ಯೆ | ವರ್ಗಗಳು | ಒಟ್ಟು |
|---|---|---|
| 1 | ದೊಂಬರಾಟ, ವಿದೂಷಕ | 1 |
| 2 | ಬಿದಿರು ವೃತ್ತಿಯಲ್ಲಿ ತೊಡಗಿರುವ ಮೇದಾರರು | 182 |
| 3 | ಬಳೆ ವ್ಯಾಪಾರ/ಮೇಣದ ಬತ್ತಿ ತಯಾರಿಕೆ | 7 |
| 4 | ಕ್ಷೌರಿಕರು | 92313 |
| 5 | ಬಣ್ಣ ಶೃಂಗಾರ (ಬ್ಯೂಟಿ ಪಾರ್ಲರ್) ಮಾಡುವ ವೃತ್ತಿ | 25 |
| 6 | ಬೀಡಿ ಕಾರ್ಮಿಕರು | 85514 |
| 7 | ಕಬ್ಬಿಣದ, ತಾಮ್ರದ ತಂತಿಗಳನ್ನು ಉಪಯೋಗಿಸಿ ವಿಧವಿಧವಾದ ಬಳೆ ಮತ್ತು ಅಲಂಕಾರಿಕ ವಸ್ತುಗಳನ್ನು ತಯಾರಿಸುವುದು. | 5 |
| 8 | ಕೇಬಲ್ ಕಾರ್ಮಿಕರು | 12992 |
| 9 | ಪೊರಕೆ ಕಡ್ಡಿ ತಯಾರಿಕೆ | 2 |
| 10 | ಹಗ್ಗ ಸಿದ್ಧಪಡಿಸುವ (ಬೈಜಂತ್ರಿ) ಕಾರ್ಮಿಕರು | 76 |
| 11 | ಕೇಬಲ್ ಕಾರ್ಮಿಕರು | 8 |
| 12 | ಬಡಗಿ ಕೆಲಸ/ಮರದ ಕೆತ್ತನೆ ಕೆಲಸ | 10 |
| 13 | ದನಗಾಹಿ ವೃತ್ತಿ, ಹೈನುಗಾರಿಕೆ(ಗೌಳಿ ವೃತ್ತಿ) | 8 |
| 14 | ಸಿನಿ ಕಾರ್ಮಿಕರು | 19360 |
| 15 | ಚಪ್ಪಲಿ ತಯಾರಿಕೆ ಮತ್ತು ರಿಪೇರಿ ಮಾಡುವ ಕಾರ್ಮಿಕರಾದ ಚಮ್ಮಾರರು | 7 |
| 16 | ತಾಮ್ರ, ಬೆಳ್ಳಿ, ಕಲ್ಲು, ಹಿತ್ತಾಳೆಗಳಿಂದ ಆಭರಣಗಳನ್ನು ತಯಾರಿಸಿ ಮಾರಾಟ ಮಾಡುವುದು. | 1 |
| 17 | ಅಸಂಘಟಿತ ವಿಕಲಚೇತನ ಕಾರ್ಮಿಕರು | 273 |
| 18 | ಗೃಹ ಕಾರ್ಮಿಕರು | 321123 |
| 19 | ಡ್ರಂ ಭಾರಿಸುವುದು ಮತ್ತು ಕೊಳಲು ನುಡಿಸುವುದು, | 2 |
| 20 | ಕೋಳಿಮೊಟ್ಟೆ, ಮೀನು ಮಾರಾಟ | 7 |
| 21 | ಮೀನುಗಾರಿಕೆ | 3 |
| 22 | ಹೂವು ಕಟ್ಟುವ ವೃತ್ತಿ | 34 |
| 23 | ಗ್ಲಾಸ್ ಬೀಡ್ಸ್ ತಯಾರಿಕೆ | 2 |
| 24 | ಅಕ್ಕಸಾಲಿಗರು | 16209 |
| 25 | ಗೊಂದಲು ಹಾಕುವುದು (ಪೂಜಾ ವಿಧಾನ) | 6 |
| 26 | ಅರಿಶಿನ ಕುಂಕುಮ ಮಾರಾಟ, ಮಸಾಲೆ ದಿನಸಿ ಮಾರಾಟ | 1 |
| 27 | ಹಮಾಲರು | 87527 |

| | | |
|---|---|---|
| 28 | ಔಷಧ ಮಾರಾಟಗಾರರು, ಭಿಕಾರಿ ವೈದ್ಯ ವೃತ್ತಿ | 3 |
| 29 | ಹೋಟೆಲ್ ಕಾರ್ಮಿಕರು | 249114 |
| 30 | ವಿಗ್ರಹ/ ಕಲ್ಲು ಕೆತ್ತನೆ ಕೆಲಸ | 2 |
| 31 | ಅಗರಬತ್ತಿ ತಯಾರಿಕೆ | 8 |
| 32 | ಸ್ವತಂತ್ರ ಲೇಖನ ಬರಹಗಾರರು | 102 |
| 33 | ಕಲ್ಯಾಣ ಮಂಟಪ/ಸಭಾ ಭವನ/ ಟೆಂಟ್/ ಪೆಂಡಾಲ್‌ಗಳ ಕೆಲಸ ನಿರ್ವಹಿಸುವ ಎಲ್ಲಾ ಕಾರ್ಮಿಕರು | 1978 |
| 34 | ಭಟ್ಟಿ ಕಾರ್ಮಿಕರು | 8358 |
| 35 | ಮೆಷನರಿ ವರ್ಕ್ | 20 |
| 36 | ಗಾರುಡಿಗರು, ಬೀಸುವ ಕಲ್ಲು ಮತ್ತು ಬೀಸಣಿಗೆ ಮಾರಾಟ, ಮರದ ಸೌಟುಗಳ ತಯಾರಿಕೆ, ಸೂಜಿ, ದಾರ, ಒಳಕಲ್ಲು ಮಾರಾಟ | 1 |
| 37 | ಸಿನಿ ಕಾರ್ಮಿಕರು | 427 |
| 38 | ಅಲೆಮಾರಿ ಪಂಗಡದ ಕಾರ್ಮಿಕರು | 1700 |
| 39 | ಫೋಟೋಗ್ರಾಫರ್‌ಗಳು | 12655 |
| 40 | ಕುಂಬಾರರು | 18589 |
| 41 | ಚಿಂದಿ ಆಯುವವರು | 15507 |
| 42 | ಕುರಿ ಸಾಕಾಣಿಕೆ | 16 |
| 43 | ಶೀಟ್ ಮೆಟಲ್ ವೃತ್ತಿ | 1 |
| 44 | ರೇಷ್ಮೆ ವೃತ್ತಿಯಲ್ಲಿ ತೊಡಗಿರುವ ಕಾರ್ಮಿಕರು | 6 |
| 45 | ಬೀದಿಬದಿ ವ್ಯಾಪಾರಿಗಳು | 51576 |
| 46 | ಗಾಣದ ಕೆಲಸ | 1 |
| 47 | ಟೈಲರ್‌ಗಳು | 1292742 |
| 48 | ಬಣ್ಣಗಾರಿಕೆ, ಮುದ್ರಣಗಾರಿಕೆ ಮತ್ತು ಹಚ್ಚೆ ಹಾಕುವುದು | 2 |
| 49 | ಅಗಸರು | 80870 |
| 50 | ನೇಕಾರರು | 160304 |
| 51 | ವೆಲ್ಡಿಂಗ್ ವರ್ಕ್ಸ್ | 8 |
| 52 | ಉಣ್ಣೆ ಮತ್ತು ಕಂಬಳಿ ನೇಯ್ಗೆ ಹಾಗೂ ಕಂಬಳಿ ತಯಾರಿಕೆ | 2 |
| 53 | ಮುದ್ರಣ ಕೆಲಸದಲ್ಲಿ ತೊಡಗಿರುವ ಕಾರ್ಮಿಕರು | 10 |
| 54 | ಇತರ ಅಸಂಘಟಿತ ಕಾರ್ಮಿಕರು | 15907 |
| **Grand Total** | | **2545607** |

## ಅನುಬಂಧ-2

**ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀ ಡಿ ಟಿ ಶ್ರೀನಿವಾಸ್ (ಡಿ.ಟಿ.ಎಸ್)(ಶಿಕ್ಷಕರ ಕ್ಷೇತ್ರ)**
**ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1123(1262)**
**ಕರ್ನಾಟಕ ರಾಜ್ಯ ಮೋಟಾರು ಸಾರಿಗೆ ಹಾಗೂ ಇತರೆ ಸಂಬಂದಿತ ಕಾರ್ಮಿಕರ ಯೋಜನೆಯಡಿ ನೋಂದಾಯಿತರಾದ ಸಾರಿಗೆ ಕಾರ್ಮಿಕರ ವೃತ್ತಿವಾರು ವಿವರ**

| ಕ್ರ ಸಂಖ್ಯೆ | ವರ್ಗಗಳು | ಒಟ್ಟು |
|---|---|---|
| 1 | ಮೋಟಾರು ವಾಹನ ಹೊರಕವಚ ನಿರ್ಮಾಣ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು | 360 |
| 2 | ಬುಕಿಂಗ್ ಗುಮಾಸ್ತರು | 38 |
| 3 | ನಗದು ಗುಮಾಸ್ತರು | 49 |
| 4 | ಕ್ಲೀನರ್‌ಗಳು | 4616 |
| 5 | ನಿರ್ವಾಹಕರು | 5405 |
| 6 | ಡಿಪೋ ಗುಮಾಸ್ತರು | 5 |
| 7 | ಖಾಸಗಿ ವಾಣಿಜ್ಯ ವಾಹನ ಚಾಲಕರು | 762510 |
| 8 | ಎಲೆಕ್ಟ್ರಿಕಲ್ ಹಾಗೂ ಎಸಿ ಘಟಕ ಇತ್ಯಾದಿ ಸಂಸ್ಥೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು | 1 |
| 9 | ಮಾರ್ಗ ಪರಿಶೀಲನಾ ಸಿಬ್ಬಂದಿಗಳು | 16 |
| 10 | ಮೆಕ್ಯಾನಿಕ್ಸ್ | 148307 |
| 11 | ಮೋಟಾರ್ ಗ್ಯಾರೇಜ್ ಸಿಬ್ಬಂದಿ | 567 |
| 12 | ಪಂಚರ್ ದುರಸ್ತಿ ಮಳಿಗೆಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು | 271 |
| 13 | ಲೋಡಿಂಗ್ ಮತ್ತು ಅನ್ ಲೋಡಿಂಗ್ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು | 595 |
| 14 | ನಿಲ್ದಾಣ ಸಿಬ್ಬಂದಿಗಳು | 31 |
| 15 | ಸಮಯ ಪಾಲಕರು | 23 |
| 16 | ಮೋಟಾರು ಗ್ಯಾರೇಜುಗಳಲ್ಲಿ ಟೈರ್ ಜೋಡಿಸುವ ಮತ್ತು ಬೇರ್ಪಡಿಸುವ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು | 73 |
| 17 | ಕಾವಲುಗಾರ ಅಥವಾ ಪರಿಚಾರಕರು | 62 |
| 18 | ನೀರಿನಿಂದ ಸ್ವಚ್ಛಗೊಳಿಸುವ ಘಟಕಗಳಲ್ಲಿ ಕೆಲಸ ಮಾಡುವವರು | 65 |
| 19 | ವೀಲ್ ಬ್ಯಾಲೆನ್ಸಿಂಗ್ ಮತ್ತು ಅಲೈನ್ಮೆಂಟ್ ಘಟಕಗಳಲ್ಲಿ ಕೆಲಸ ನಿರ್ವಹಿಸುತ್ತಿರುವ ಕಾರ್ಮಿಕರು | 15 |
| 20 | ಮೋಟಾರು ಸಾರಿಗೆಗೆ ಸಂಬಂಧಿಸಿದಂತೆ ಕೆಲಸ ನಿರ್ವಹಿಸುವ ಇನ್ನಿತರೆ ಕಾರ್ಮಿಕರು. | 127086 |
| | **ನೋಂದಣಿಯಾದ ಒಟ್ಟು ಕಾರ್ಮಿಕರು** | **1050095** |

**ಅನುಬಂಧ-3**
**ವಿಧಾನ ಸಭೆ ಮಾನ್ಯ ಸದಸ್ಯರಾದ ಶ್ರೀ ಡಿ ಟಿ ಶ್ರೀನಿವಾಸ್ (ಡಿ.ಟಿ.ಎಸ್)(ಶಿಕ್ಷಕರ ಕ್ಷೇತ್ರ)**
**ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 1123(1262)**
**ಇ-ಶ್ರಮ್ ಯೋಜನೆಯಡಿ ನೋಂದಾಯಿತರಾದ ಅಸಂಘಟಿತ ಕಾರ್ಮಿಕರ**
**ವೃತ್ತಿವಾರು ವಿವರ**

| ಕ್ರ ಸಂಖ್ಯೆ | ವರ್ಗಗಳು | ಒಟ್ಟು |
|---|---|---|
| 1 | ಕೃಷಿ | 6155456 |
| 2 | ಉಡುಪು | 1205190 |
| 3 | ಕಟ್ಟಡ ನಿರ್ಮಾಣ | 1134885 |
| 4 | ವಿವಿಧ/ಇತರೆ | 487465 |
| 5 | ಆಟೋಮೊಬೈಲ್ ಮತ್ತು ಸಾರಿಗೆ | 423164 |
| 6 | ಗೃಹ ಮತ್ತು ಗೃಹ ಕಾರ್ಮಿಕರು | 249934 |
| 7 | ಚರ್ಮ ಕೈಗಾರಿಕೆ ಕೆಲಸಗಳು | 198407 |
| 8 | ಕಚೇರಿ ಆಡಳಿತ ಮತ್ತು ಸೌಲಭ್ಯ ನಿರ್ವಹಣೆ | 150984 |
| 9 | ಬಂಡವಾಳ ಸರಕುಗಳು ಮತ್ತು ಉತ್ಪಾದನೆ | 140414 |
| 10 | ಆರೋಗ್ಯ ರಕ್ಷಣೆ | 128926 |
| 11 | ತಂಬಾಕು ಉದ್ಯಮ | 120609 |
| 12 | ಪ್ರವಾಸೋದ್ಯಮ ಮತ್ತು ಆತಿಥ್ಯ | 114760 |
| 13 | ಎಲೆಕ್ಟ್ರಾನಿಕ್ಸ್ ಮತ್ತು HW | 105125 |
| 14 | ಕರಕುಶಲ ವಸ್ತುಗಳು ಮತ್ತು ಕಾರ್ಪೆಟ್‌ಗಳು | 92800 |
| 15 | ವಿದ್ಯಾಭ್ಯಾಸ | 59008 |
| 16 | ಆಹಾರ ಉದ್ಯಮ | 54609 |
| 17 | ಚಿಲ್ಲರೆ ವ್ಯಾಪಾರ | 47902 |
| 18 | ಸೌಂದರ್ಯ ಮತ್ತು ಸ್ವಾಸ್ಥ್ಯ | 46131 |
| 19 | ವೃತ್ತಿಪರರು | 35468 |
| 20 | ರತ್ನ ಮತ್ತು ಆಭರಣಗಳು | 32340 |
| 21 | ಮುದ್ರಣ | 22199 |
| 22 | ಖಾಸಗಿ ಭದ್ರತೆ | 12725 |
| 23 | ಸೇವೆಗಳು | 10763 |
| 24 | ಮರ ಮತ್ತು ಮರಗೆಲಸ | 6245 |
| 25 | ಗಣಿಗಾರಿಕೆ | 4943 |
| 26 | ಗಾಜು ಮತ್ತು ಸೆರಾಮಿಕ್ ವಸ್ತುಗಳು | 4022 |
| 27 | ಜವಳಿ ಮತ್ತು ಕೈಮಗ್ಗ | 3905 |
| 28 | ಸಂಗೀತ ವಾದ್ಯಗಳು | 3271 |
| 29 | ಸಂಘಟಿತ ಚಿಲ್ಲರೆ ವ್ಯಾಪಾರ | 2271 |
| 30 | ಬ್ಯಾಂಕಿಂಗ್, ಹಣಕಾಸು ಸೇವೆಗಳು ಮತ್ತು ವಿಮೆ | 1368 |
| **Total** | | **11055289** |